# ಕರ್ನಾಟಕ ಸರ್ಕಾರ

ಸಂ.SFS-5/ರಿಬೀವಿ/ಮಾ.ಸೂ/ಮು-15/2015-16

ಕೃಷಿ ಇಲಾಖೆ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ: 15-06-2015.

## ಸುತ್ತೋಲೆ - 7

ವಿಷಯ:- 2015ರ ಮುಂಗಾರು ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುವ ಬಗ್ಗೆ.

ಉಲ್ಲೇಖ:- 1. ಮೆ: ಸಂಗಮ ಸೀಡ್ಸ್, ಬಾಗಲಕೋಟೆ, ಇವರ ಪತ್ರದ ದಿನಾಂಕ: 2.6.2015
2.ಮೆ: ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಇವರ ಪತ್ರದ ಸಂ: ಕರಾಬೀನಿ/ಎಂ.ಪಿ.ಡಿ. ಮತ್ತು ಸಿ/1425/2015-16,ದಿನಾಂಕ: 03.04.2015.

***

2015ರ ಮುಂಗಾರು ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುವ ಬಗ್ಗೆ ಬೆಳೆವಾರು ನೀಡಬಹುದಾದ ರಿಯಾಯಿತಿ ದರ (ಪ್ರತಿ ಕೆ.ಜಿ.ಗೆ) ಮಾರಾಟ ದರ ಮತ್ತು ಬೀಜ ಪೂರೈಕೆ ಸಂಸ್ಥೆಗಳ ವಿಳಾಸವನ್ನು ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ.

ಮೆ: ಸಂಗಮ ಸೀಡ್ಸ್, ಬಾಗಲಕೋಟೆ ಇವರು ಉಲ್ಲೇಖ-1ರ ಪತ್ರದಲ್ಲಿ ಇಲಾಖೆಗೆ ಮನವಿಯನ್ನು ಸಲ್ಲಿಸಿ ಹೆಸರು ಬೆಳೆಯ ಶೈನಿಂಗ್ ಮೂಂಗ್ ತಳಿಯನ್ನು ಇಲಾಖೆಯ ರಿಯಾಯಿತಿ ಯೋಜನೆಯಡಿ ಸರಬರಾಜು ಮಾಡಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಆದುದರಿಂದ ಸದರಿಯವರಿಗೆ ಈ ಕೆಳಕಂಡ ಹೆಸರು ಬೆಳೆ/ತಳಿಯನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡಲು ಅನುಮತಿ ನೀಡಲಾಗಿದೆ.

| ಕ್ರ. ಸಂ | ಸಂಸ್ಥೆ | ಬೆಳೆ | ತಳಿ | ಬಿತ್ತನೆ ಬೀಜದ ಹಂತ | ಒಪ್ಪಿರುವ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ಅಂಗೀಕರಿಸಲಾದ ಮಾರಾಟದ ದರ (ರೂ. ಪ್ರತಿ ಕ್ವಿಂಟಾಲ್‌ಗೆ) |
|---|---|---|---|---|---|---|
| 1 | ಮೆ: ಸಂಗಮ ಸೀಡ್ಸ್ | ಹೆಸರು | SM | ನಿಜಚೀಟಿ | 100=00 | 9000=00 |

ಮುಂದುವರೆದು, ಮೆ: ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಬೆಂಗಳೂರು ಇವರು ಉಲ್ಲೇಖ-2ರ ಪತ್ರದಲ್ಲಿ ಇಲಾಖೆಗೆ ಮನವಿಯನ್ನು ಸಲ್ಲಿಸಿ, ಭತ್ತ ಬೆಳೆಯ BPT-5204 ತಳಿಗೆ ಮಾರುಕಟ್ಟೆ ದರವು ಇಳಿಕೆಯಾಗಿರುವುದರಿಂದ ಮಾರಾಟ ದರವನ್ನು ಪರಿಷ್ಕರಿಸಿಕೊಡಬೇಕೆಂದು ಕೋರಿರುತ್ತಾರೆ. ಆದುದರಿಂದ, ಈ ಕೆಳಗಿನಂತೆ ದರವನ್ನು ಪರಿಷ್ಕರಿಸಲಾಗಿರುತ್ತದೆ.

| ಕ್ರ. ಸಂ | ಸಂಸ್ಥೆ | ಬೆಳೆ | ತಳಿ | ಬಿತ್ತನೆ ಬೀಜದ ಹಂತ | ದಿನಾಂಕ: 8-4-2015ರ ಸುತ್ತೋಲೆ-1ರ ಪ್ರಕಾರ ನಿಗಧಿ ಪಡಿಸಲಾದ ಮಾರಾಟದ ದರ (ರೂ. ಪ್ರತಿ ಕ್ವಿಂಟಾಲ್‌ಗೆ) | ಅಂಗೀಕರಿಸಲಾದ ಪರಿಷ್ಕೃತ ಮಾರಾಟದ ದರ (ರೂ. ಪ್ರತಿ ಕ್ವಿಂಟಾಲ್‌ಗೆ) |
|---|---|---|---|---|---|---|
| 1 | ಕೆ.ಎಸ್.ಎಸ್.ಸಿ. | ಭತ್ತ | BPT-5204 | ಪ್ರಮಾಣಿತ | 3200=00 | 3000=00 |

2015ರ ಮುಂಗಾರು ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬೀಜ ವಿತರಿಸಲು, ನೀಡಲಾಗಿರುವ ಮಾರ್ಗಸೂಚಿಯ ಅಂಶಗಳನ್ನು ಅನುಸರಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸುವುದು. ಬೀಜ ವಿತರಣಾ ಪ್ರಗತಿಯನ್ನು ಕಾಲಕಾಲಕ್ಕೆ ತಪ್ಪದೇ ಕೇಂದ್ರ ಕಛೇರಿಗೆ ನಿಗಧಿತ ನಮೂನೆಯಲ್ಲಿ ಕಳುಹಿಸಿಕೊಡಲು ಸೂಚಿಸಿದೆ.

***ಕರಡು ಪ್ರತಿ ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.***

ಕೃಷಿ ಆಯುಕ್ತರ ಪರವಾಗಿ

1. ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಪ್ರತಿಯನ್ನು ಮೆ: ಸಂಗಮ ಸೀಡ್ಸ್, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
4. ಪ್ರತಿಯನ್ನು ಮೆ: ಕರ್ನಾಟಕ ರಾಜ್ಯ ಬೀಜ ನಿಗಮ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.